206

# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ-8234/2015/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:05-07-2017.

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ*

ವಿಷಯ: ಶ್ರೀ ರಾಜಾಚಾರ್ ಅಧ್ಯಕ್ಷರು, ಸಿ.ಎಂ.ಸಿ., ಬಡಾವಣೆ, ನಾಗರೀಕರ ಕ್ಷೇಮಾಭಿವೃದ್ಧಿ ಸಂಘ, ಚನ್ನಪಟ್ಟಣ ತಾಲ್ಲೂಕು ನಿವಾಸಿ ಇವರು ಸಲ್ಲಿಸಿದ ದೂರಿನ ಕುರಿತು.

****

ಈ ದೂರನ್ನು ಶ್ರೀ ರಾಜಾಚಾರ್ ಅಧ್ಯಕ್ಷರು, ಸಿ.ಎಂ.ಸಿ., ಬಡಾವಣೆ, ನಾಗರೀಕರ ಕ್ಷೇಮಾಭಿವೃದ್ಧಿ ಸಂಘ, ಚನ್ನಪಟ್ಟಣ ತಾಲ್ಲೂಕು ನಿವಾಸಿ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ ಹೆಚ್. ಜಗದೀಶ, ಆಯುಕ್ತರು, ನಗರಸಭೆ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಗೌರವಾನ್ವಿತ ಲೋಕಾಯುಕ್ತರು ರಾಮನಗರ ಕ್ಯಾಂಪಿನಲ್ಲಿ ಸಾರ್ವಜನಿಕ ಕುಂದುಕೊರತೆಗಳನ್ನು ವಿಚಾರಿಸುತ್ತಿರುವಾಗ ದಿನಾಂಕ: 23-4-2015 ರಂದು ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ಚನ್ನಪಟ್ಟಣದ ಐ.ಡಿ.ಎಸ್.ಎಂ.ಟಿ. ಬಡಾವಣೆಯಲ್ಲಿ ರಸ್ತೆ, ಒಳಚರಂಡಿ, ಟಾರ್ ರಸ್ತೆಗಳನ್ನು ಮಾಡಿಲ್ಲ. ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಎದುರುದಾರರಿಗೆ ಅರ್ಜಿ ಸಲ್ಲಿಸಿದಾಗ, ಸದರಿ ಲೇಔಟ್‌ಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳು ಲೋಕಾಯುಕ್ತ ಕಛೇರಿಯಲ್ಲಿವೆ, ಸದರಿ ಲೇಔಟ್‌ನಲ್ಲಿ ಕಾನೂನುಬಾಹಿರವಾಗಿ ನಿವೇಶನಗಳನ್ನು ನಿರ್ಮಿಸಿದ ಬಗ್ಗೆ ದೂರು ಇದ್ದು ನೀವು ಕೇಳಿರುವ ಸೌಕರ್ಯಗಳನ್ನು ಕೊಡಲು ಬರುವುದಿಲ್ಲ ಅಂತ ಹೇಳುತ್ತಿದ್ದಾರೆ. ಆದ್ದರಿಂದ ಎದುರದಾರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

3. ಗೌರವಾನ್ವಿತ ಲೋಕಾಯುಕ್ತರು ಶ್ರೀ ಹೆಚ್. ಜಗದೀಶ, ಆಯುಕ್ತರು ನಗರಸಭೆ, ಚನ್ನಪಟ್ಟಣ ತಾಲ್ಲೂಕು ಇವರಿಗೆ ನಿರ್ದೇಶನ ಕೊಟ್ಟು ಲೋಕಾಯುಕ್ತ ಸಂಸ್ಥೆಯ ತಾಂತ್ರಿಕ

207

ವಿಭಾಗದಲ್ಲಿ ಅರ್ಜಿಯನ್ನು ಸಲ್ಲಿಸಿ ದೃಢೀಕೃತ ನಕಲುಗಳನ್ನು ಕೊಟ್ಟು ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ವಾಪಸ್ಸು ಪಡೆಯುವಂತೆ ಆದೇಶ ಮಾಡಿದ್ದು, ಒಂದುವರೆ ತಿಂಗಳಿನಲ್ಲಿ ಸೂಕ್ತ ಕ್ರಮವನ್ನು ಕೈಗೊಂಡು ಸದರಿ ಲೇಔಟ್‌ಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ನಿರ್ದೇಶಿಸಿದ್ದಾರೆ.

4. ಎದುರುದಾರರು ತಮ್ಮ ಮುಚ್ಚಳಿಕೆಯಲ್ಲಿ ಬರೆದುಕೊಟ್ಟಂತೆ ಯಾವುದೇ ವರದಿಯನ್ನು ಸಲ್ಲಿಸಿಲ್ಲ. ಆದ್ದರಿಂದ, ಮೇ-2015 ರಲ್ಲಿ ಪತ್ರ ಬರೆದು ಅನುಪಾಲನಾ ವರದಿಯನ್ನು ಎದುರುದಾರರಿಂದ ಕೇಳಲಾಗಿದೆ.

5. ಎದುರುದಾರರು ತಮ್ಮ ವರದಿಯಲ್ಲಿ ಈ ಬಡಾವಣೆಯಲ್ಲಿ ನಿವೇಶನಗಳನ್ನು ಬಹಿರಂಗ ಹಾಜರಿನ ಮೂಲಕ ವಿಲೇ ಮಾಡದೇ ಅನಧಿಕೃತವಾಗಿ ವಿಲೇ ಮಾಡಿರುವ ಬಗ್ಗೆ ಕಡತಗಳನ್ನು ತನಿಖೆಗಾಗಿ ತೆಗೆದುಕೊಂಡು ಹೋಗಿದ್ದಾರೆ, ಆದರೆ ತನಿಖೆ ಪೂರ್ಣಗೊಂಡಿಲ್ಲ. ಆದ್ದರಿಂದ ಆಸ್ತಿ ವಹಿಗಳ ನಕಲು, ಕಟ್ಟಡ ಪರವಾನಿಗೆ ಮತ್ತು ನಿರಾಕ್ಷೇಪಣಾ ಪತ್ರ ಕೊಡಲು ಸಾಧ್ಯವಾಗುತ್ತಿಲ್ಲ. ಈ ಬಡಾವಣೆಯ ಮುಖ್ಯ ರಸ್ತೆಗಳಿಗೆ ನಗರೋತ್ಥಾನ ಹಂತ-2 ರ ಯೋಜನೆಯಲ್ಲಿ ಡಾಂಬರೀಕರಣ ಮಾಡಲಾಗಿದೆ. ಪ್ರತಿ ರಸ್ತೆಗೂ ವಿದ್ಯುತಚ್ಛಕ್ತಿ ಸೌಲಭ್ಯವನ್ನು ಬೆಸ್ಕಾಂನಿಂದ ಒದಗಿಸಲಾಗಿದೆ. ಕುಡಿಯುವ ನೀರಿನ ಉದ್ದೇಶಕ್ಕಾಗಿ 10 ಲಕ್ಷ ಸಾಮರ್ಥ್ಯದ ಟ್ಯಾಂಕ್ ಅನ್ನು ನಿರ್ಮಿಸಲಾಗಿದೆ, ಒಳಚರಂಡಿ ವ್ಯವಸ್ಥೆ ಕಾಮಗಾರಿ ಪೂರ್ಣಗೊಂಡಿದೆ, ಕೊಳಚೆ ನೀರು ಸಂಸ್ಕರಣಾ ಘಟಕ ಸ್ಥಾಪಿಸಲು ನಿವೇಶನ ಲಭ್ಯವಿಲ್ಲ. ಆದ್ದರಿಂದ, ಹಂತ-ಹಂತವಾಗಿ ಕಾಮಗಾರಿ ಪೂರ್ಣಗೊಳಿಸಲಾಗುವುದು ಅಂತ ತಿಳಿಸಿದ್ದಾರೆ.

6. ಎದುರುದಾರರ ವರದಿಯ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದೆ.

(ಎ) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಈ ವರದಿಯು ಸತ್ಯಕ್ಕೆ ದೂರವಾಗಿದೆ, ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಬಡಾವಣೆಯ ಒಂದೇ ರಸ್ತೆಗೆ ಡಾಂಬೀರಿಕರಣವಾಗಿದೆ. ನೀರು ಸಂಗ್ರಹಣೆಯ ಟ್ಯಾಂಕಿನಿಂದ ಪಟ್ಟಣದ ಬೇರೆ ಭಾಗದಿಂದ ಪೂರೈಕೆ ಮಾಡುತ್ತಿದ್ದಾರೆ. ಬೀದಿ-ದೀಪಗಳು ಇಲ್ಲ. ಯಾವ ಬೀದಿಯಲ್ಲಿ ಚರಂಡಿ ವ್ಯವಸ್ಥೆ ಇಲ್ಲ. ಮಳೆ ನೀರು ಮಣ್ಣು ರಸ್ತೆಗಳಲ್ಲಿಯೇ ನಿಲ್ಲುತ್ತದೆ. ಕಟ್ಟಡದ ಮೇಲೆಯೇ 11 ಕಿ.ವ್ಯಾ. ಸಾಮರ್ಥ್ಯದ ತಂತಿಗಳು ಹಾಯ್ದು ಹೋಗಿವೆ. ಆದ್ದರಿಂದ ಖುದ್ದು ಸ್ಥಳ ಪರಿಶೀಲನೆ ಮಾಡಲು ಕೋರಿರುತ್ತಾರೆ.

208

7. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಗೌರವಾನ್ವಿತ ಲೋಕಾಯುಕ್ತರು ಈ ಸಂಸ್ಥೆಯ ತಾಂತ್ರಿಕ ಶಾಖೆಗೆ ಅರ್ಜಿ ಸಲ್ಲಿಸಿ ಸದರಿ ಬಡಾವಣೆಗೆ ಸಂಬಂಧಿಸಿದ ಎಲ್ಲಾ ದಾಖಲೆಗಳ ದೃಢೀಕೃತ ನಕಲುಗಳನ್ನು ಒದಗಿಸಿ ಮೂಲ ದಾಖಲೆಗಳನ್ನು ತೆಗದುಕೊಂಡು ಹೋಗಿ ಕ್ರಮ ಕೈಗೊಳ್ಳುವಂತೆ ಆದೇಶಿಸಿದ್ದರೂ ಸಹ ಸಂಬಂಧಪಟ್ಟ ದಾಖಲೆಗಳನ್ನು ತೆಗೆದುಕೊಂಡು ಹೋದಂತೆ ಕಾಣುತ್ತಿಲ್ಲ. ಏಕೆಂದರೆ 4 ತಿಂಗಳ ನಂತರ ದಿನಾಂಕ: 25-8-2015 ರಂದು ಎದುರುದಾರರು ಸಲ್ಲಿಸಿರುವ ವರದಿಯಲ್ಲಿ ಕಡತಗಳು ಮತ್ತು ವಹಿಗಳು ಲೋಕ್/ಟಿ.ಡಿ-160/2011 ರಲ್ಲಿ ಇರುತ್ತವೆ. ಕಡತಗಳು ಹಾಗೂ ವಹಿಗಳು ಲಭ್ಯ ಇರುವುದಿಲ್ಲ ಅಂತ ಪುನಃ ಹೇಳುತ್ತಾರೆ. ಗೌರವಾನ್ವಿತ ಲೋಕಾಯುಕ್ತರ ನಿರ್ದೇಶನವನ್ನು ಅನುಸರಿಸಿಲ್ಲ. ಎದುರುದಾರರು ಮುಚ್ಚಳಿಕೆ ಪತ್ರದಲ್ಲಿ ಬರೆದು ಕೊಟ್ಟಿರುವಂತೆ 2 ತಿಂಗಳಿನಲ್ಲಿ ವರದಿಯನ್ನು ಸಲ್ಲಿಸಿಲ್ಲ. ಐ.ಡಿ.ಎಸ್.ಎಂ.ಟಿ ಬಡಾವಣೆಯ ಒಂದೇ ಮುಖ್ಯ ರಸ್ತೆಗೆ ಟಾರ್ ರೋಡ್ ಅನ್ನು ಹಾಕಲಾಗಿದೆ, ಆದರೆ ಎಲ್ಲಾ ಮುಖ್ಯ ರಸ್ತೆಗಳಿಗೆ ಡಾಂಬರೀಕರಣ ಮಾಡಲಾಗಿದೆ ಅಂತ ತಿಳಿಸಿದ್ದಾರೆ. ಪ್ರತಿ ರಸ್ತೆಗೂ ವಿದ್ಯುತಚ್ಚಕ್ತಿ ಸಂಪರ್ಕ ಇದೆ ಎನ್ನುತ್ತಾರೆಯೇ ಹೊರತು ಬೀದಿ ದೀಪಗಳನ್ನು ಹಾಕಲಾಗಿದೆ ಅಂತ ತಿಳಿಸಿಲ್ಲ, ಒಳಚರಂಡಿಯ ವ್ಯವಸ್ಥೆಯನ್ನು ಸರಿಯಾಗಿ ಕಲ್ಪಿಸಿದ್ದರೆ ಚರಂಡಿ ನೀರು ಅಲ್ಲಲ್ಲಿ ಏಕೆ ನಿಂತು ಕೊಂಡಿದೆ ಎನ್ನುವುದನ್ನು ವಿವರಿಸಿಲ್ಲ. ಆದ್ದರಿಂದ ಎದುರುದಾರರು ಕರ್ತವ್ಯಲೋಪವನ್ನು ಎಸಗಿದ್ದಾರೆ ಎನ್ನಲು ಸಾಕಷ್ಟು ಆಧಾರಗಳಿವೆ. ಆದ್ದರಿಂದ ದೂರುದಾರರು ವಾಸಿಸುತ್ತಿರುವ ಐ.ಡಿ.ಎಸ್.ಎಂ.ಟಿ ಬಡಾವಣೆಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳುವಂತೆ ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ನಿರ್ದೇಶಿಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಲಾಗಿದೆ.

8. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.